ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ಕೈಗಾರಿಕೆಗಳಿಗೋಸ್ಕರವಾಗಿ 5 ಜನ ಅರ್ಜಿ ಹಾಕಿದ್ದರು . ಅದಕ್ಕೋಸ್ಕರ 1-3 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಕೈಗಾರಿಕಾ ಎಸ್ಟೇಟನ್ನು ಪ್ರಾರಂಭಮಾಡುವುದಕ್ಕೆ ಅರ್ಜಿಗಳು ಬಂದಮೇಲೆ ಪ್ರಾರಂಭ ಮಾಡುತ್ತೀರೋ, ಇಲ್ಲ ಆ ಊರಿನಲ್ಲಿ ಕೈಗಾರಿಕೆಗಳು ಬೆಳೆಯಬೇಕೆಂಬ ದೃಷ್ಟಿಯಿಂದ ಕೈಗಾರಿಕಾ ಎಸ್ಟೇಟನ್ನು ಪಾರಂಭ ಮಾಡುತ್ತಿರೋ?

ಶ್ರೀ ಸಿ. ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷರೇ, 1980ನೇ ಇಸವಿಯಲ್ಲಿ ಬೇಲೂರು ಅಂಥ ಒಂದು ಸಣ್ಣ ಊರಿನಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡುವಂಥ ಆಲೋಚನೆ ಸರ್ಕಾರಕ್ಕೆ ಇರಲಿಲ್ಲ. ಆದರೆ ಜನರು ಬೇಡಿಕೊಂಡ ನಂತರ ಈ ಕಾರ್ಯವನ್ನು ಪ್ರಾರಂಭ ಮಾಡಬೇಕೆಂಬ ದೃಷ್ಟಿಯಿಂದ ನಾವು ಈ ಜಮೀನನ್ನು ಅಕ್ವೈರ್ ಮಾಡಿಕೊಳ್ಳುವಂತಹ ಪ್ರಯತ್ನ ಮಾಡಿದ್ದೇವೆ. ಈಗ ಸರ್ಕಾರದ ಒಂದು ನೀತಿಯಿಂದಾಗಿ ಇಡೀ ರಾಜ್ಯದಲ್ಲಿಯೇ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆನ್ನುವ ಉದ್ದೇಶದಿಂದ ಬೇಲೂರು ಪಟ್ಟಣದಲ್ಲಿ 10 ಎಕರೆ ಜಾಗವನ್ನು ನಾವು ಅಕ್ವಯರ್ ಮಾಡುವ ಪ್ರಯತ್ನದಲ್ಲಿದ್ದೇವೆ. ಅದಕ್ಕೆ ತಕ್ಕಂತೆ ಹಣವನ್ನು ಕೊಟ್ಟಿದ್ದೇವೆ. ಇದರಿಂದ ಮುಂದಿನ ದಿನಗಳಲ್ಲಿ ಆ ಭಾಗದ ಜನರಿಗೆ ಲಾಭವಾಗುತ್ತದೆ ಎನ್ನುವ ಆಲೋಚನೆಯನ್ನು ಮಾಡಿ ಈ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ಆವತ್ತಿನ ಕಾಲದಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ ಕೈಗಾರಿಕಾ ಎಸ್ಟೇಟ್‌ಗಳನ್ನು ಮಾಡಬೇಕೆಂದು ಸರ್ಕಾರದ ಒಂದು ನೀತಿಯಾಗಿತ್ತು. ಅಂಥದ್ದರಲ್ಲಿ, ಬೇಲೂರಿನಂಥ ಸಣ್ಣ ಪಟ್ಟಣದಲ್ಲಿ ಮಾಡಲಿಕ್ಕೆ ಆಗುವುದಿಲ್ಲ, ಅವರು 5 ಜನ ಬಂದಿದ್ದಕ್ಕೋಸ್ಕರ ನಾವು ಮಾಡಿದ್ದೇವೆ ಎಂದು ಹೇಳುವುದು ಸತ್ಯಕ್ಕೆ ದೂರವಾದುದು. 1980ರಲ್ಲಿ ಅನೇಕ ತಾಲ್ಲೂಕುಗಳಲ್ಲಿ ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಎಷ್ಟೋ ಕಡೆ ಕೈಗಾರಿಕಾ ಷೆಡ್ಡುಗಳನ್ನು ಕಟ್ಟಿ ಆ ಕೈಗಾರಿಕಾ ಷೆಡ್‌ಗಳು ಇವತ್ತು ಖಾಲಿ ಬಿದ್ದಿವೆ. ಬೇರೆ ಬೇರೆ ತಾಲ್ಲೂಕುಗಳಲ್ಲಿ ಈ ರೀತಿಯಾಗಿದೆ. ಆದ್ದರಿಂದ ಇಲ್ಲಿ ಏತಕ್ಕೆ ತಾವು ಕಟ್ಟಲ್ಲಿಲ್ಲವೆಂದು ನಾನು ಕೇಳುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ನಾನು ಮುಂಚೆ ಹೇಳಿದ ಹಾಗೆ, ಗೌರವಾನ್ವಿತ ಸದಸ್ಯರೇ ನಮ್ಮ ಇಲಾಖೆಗೆ ಒಂದು ಪತ್ರ ವ್ಯವಹಾರವನ್ನು ಮಾಡಿ ಈ ಪಟ್ಟಣದ ಮಧ್ಯಭಾಗದಲ್ಲಿ ಈ ಜಾಗ ಬರುವುದರಿಂದ ಇಲ್ಲಿ ಕೈಗಾರಿಕೆಯನ್ನು ಪ್ರಾರಂಭಮಾಡುವುದು ಸೂಕ್ತವಲ್ಲ, ಆ ದೃಷ್ಟಿಯಿಂದ ಈ ಜಾಗವನ್ನು ಕೃಷಿ ಇಲಾಖೆಗೆ ಕೊಡುವಂತದ್ದು ಸೂಕ್ತವೆಂದು ಅವರೇ ತೀರ್ಮಾನ ಮಾಡಿದ ನಂತರ ಈ ಜಾಗವನ್ನು ನಾವು ಕೃಷಿ ಇಲಾಖೆಗೆ ವರ್ಗಾಯಿಸಿದ್ದೇವೆ. ಆ ದೃಷ್ಟಿಯಿಂದ ಆ ಸಮಯದಲ್ಲಿ ಮಾಡಲಿಕ್ಕೆ ಸಾಧ್ಯವಾಗಲಿಲ್ಲವೆನ್ನುವ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ.

<u>ವಿಷಯ :- ಸೋಮವಾರಪೇಟೆ ತಾಲ್ಲೂಕಿನ ರೇಷ್ಮೆ ಇಲಾಖೆಯಲ್ಲಿ, 1991ರಿಂದ ಹರಿಜನ ಗಿರಿಜನರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ.</u>

Q:569

ಶ್ರೀ ಎ. ಎಂ ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೋಮವಾರಪೇಟೆ ತಾಲ್ಲೂಕಿನಲ್ಲಿ ರೇಷ್ಮೆ ಇಲಾಖೆಯಲ್ಲಿ 1991ರಿಂದ ಇದುವರೆಗೂ ಎಷ್ಟು ಜನ ಹರಿಜನ, ಗಿರಿಜನರಿಗೆ ಸರ್ಕಾರದಿಂದ ಸೌಲಭ್ಯ ಕಲ್ಪಿಸಲಾಗಿದೆ.

ಆ) ಯೋಜನೆಗಳ ವಿವರಗಳೇನು? ಹಾಗೂ ಒಟ್ಟು ಮಂಜೂರಾದ ಹಣವೆಷ್ಟು?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) 1991ರಿಂದ ಇದುವರೆವಿಗೂ 204 ಪರಿಶಿಷ್ಟ ಜಾತಿಯವರಿಗೆ ಮತ್ತು 77 ಪರಿಶಿಷ್ಟ ಪಂಗಡದವರಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಆ) <u>ಯೋಜನೆಗಳು (ಪರಿಶಿಷ್ಟ ಜಾತಿ)</u>

1. ಹಿಪ್ಪು ನೇರಳೆ ಬೇಸಾಯಕ್ಕೆ ಪ್ರೋತ್ಸಾಹ ಧನ
2. ತರಬೇತಿ ಕಾರ್ಯಕ್ರಮ
3. ಸೋಂಕು ನಿವಾರಣೆಗಳು ಮತ್ತು ರೇಷ್ಮೆ ಮೊಟ್ಟೆ ಸರಬರಾಜು
4. ರೇಷ್ಮೆ ಹುಳು ಸಾಕಣೆ ಉಪಕರಣಗಳ ಸರಬರಾಜು
5. ರೇಷ್ಮೆ ಹುಳು ಸಾಕಣೆ ಮನೆಗೆ ಶೇಕಡ 60ರ ಸಹಾಯಧನ, ಈ ಮೇಲ್ಕಂಡ ಯೋಜನೆಗಳಿಗೆ ಮಂಜೂರಾದ ಹಣ ರೂ.1.89 ಲಕ್ಷಗಳು.

<u>ಯೋಜನೆಗಳು (ಪರಿಶಿಷ್ಟ ಪಂಗಡ)</u>

1. ಹಿಪ್ಪು ನೆರಳೆ ವ್ಯವಸಾಯಕ್ಕೆ ಪ್ರೋತ್ಸಾಹಧನ
2. ರೇಷ್ಮೆ ಹುಳು ಸಾಕಲು ಉಪಕರಣಗಳ ಸರಬರಾಜು ಮೇಲ್ಕಂಡ ಯೋಜನೆಗಳಿಗೆ ಮಂಜೂರಾದ ಹಣ ರೂ. 1.40.ಲಕ್ಷಗಳು.

10.45 ಎ.ಎಂ.

ಶ್ರೀ ಎ. ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ 1991ರಿಂದ ಇದುವರೆಗೆ 204 ಪರಿಶಿಷ್ಟ ಜಾತಿಯವರಿಗೆ ಮತ್ತು 77 ಪರಿಶಿಷ್ಟ ಪಂಗಡದವರಿಗೆ ಸೌಲಭ್ಯ ಕೊಡಲಾಗಿದೆ ಎಂದು ಹೇಳಿದ್ದಾರೆ. ಸೌಲಭ್ಯ ಎಷ್ಟು ಕೊಟ್ಟಿದ್ದೀರಿ ಎಂದರೆ ತಮ್ಮ ಉತ್ತರದಲ್ಲಿ ಪರಿಶಿಷ್ಟ ಜಾತಿಯ 244 ಜನರಿಗೆ 1,89,000 ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಪುನಃ ಇನ್ನೊಂದು ಉತ್ತರದಲ್ಲಿ ಪರಿಶಿಷ್ಟ ಪಂಗಡದ 77 ಜನರಿಗೆ 1,40,000 ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈ ಹಣವನ್ನು ನೋಡುವಾಗ ಸರಾಸರಿಯಾಗಿ ಪರಿಶಿಷ್ಟ ಜಾತಿಯವರಿಗೆ 1020 ರೂಪಾಯಿಗಳು ಬರುತ್ತದೆ, ಪರಿಶಿಷ್ಟ ಪಂಗಡದವರಿಗೆ 2400 ರೂಪಾಯಿಗಳು ಬರುತ್ತದೆ. ಏತಕ್ಕೋಸ್ಕರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಇಷ್ಟು ವ್ಯತ್ಯಾಸ ಬರುತ್ತದೆ? What is the policy of the Government with regard to the disribution of benefits to these people? ಎರಡನೆಯದಾಗಿ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿ 5-6 ತಿಂಗಳು ಮಳೆ ಇರುತ್ತದೆ. ಬಾಕಿ ವೇಳೆಯಲ್ಲಿ ಮಳೆಯೂ ಇರುವುದಿಲ್ಲ, ನೀರೂ ಇರುವುದಿಲ್ಲ. ರೇಷ್ಮೆ 12 ತಿಂಗಳ ಬೆಳೆ, 3-4 ಕಟಾವು ಮಾಡುತ್ತಾರೆ. ಮಳೆ ಇಲ್ಲದ ಸಮಯದಲ್ಲಿ ಕೆಲವರು ಮಾತ್ರ ಗಂಗಾಕಲ್ಯಾಣ ಯೋಜನೆಯಲ್ಲಿ ಅದರ ಪ್ರಯೋಜನ ಪಡೆಯುತ್ತಾರೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬೋರ್‌ವೆಲ್ ಫೆಸಿಲಿಟೀಸ್ ಇಲ್ಲ, ನೀರೂ ಇಲ್ಲದೆ ತೊಂದರೆಯಾಗಿದೆ. ಈ ವಿಚಾರದಲ್ಲಿ ಸರ್ಕಾರ ಪಾಲಿಸಿ ಏನು? ಇಂಥವರಿಗೆ ಬೋರ್‌ವೆಲ್ ಹಾಕಿಸಿ ಕೊಡುತ್ತೀರಾ?

ಡಾ. ಜಿ. ಪರಮೇಶ್ವರ : ಕೊಡಗು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ರೇಷ್ಮೆ ಕಸುಬಿನಲ್ಲಿರತಕ್ಕವರು ಇದ್ದಾರೆ. ಪರಿಶಿಷ್ಟ ಜಾತಿಯವರು 256 ಮಂದಿ ಇದ್ದರೆ ಪರಿಶಿಷ್ಟ ವರ್ಗದವರು 165 ಜನರಿದ್ದಾರೆ. ಇವರಿಗೆ 1991-92 ರಲ್ಲಿ 2,70,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1992-93 ರಲ್ಲಿ 1,73,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪರಿಶಿಷ್ಟ ವರ್ಗದವರಿಗೆ 1991-92ರಲ್ಲಿ 86 ಸಾವಿರ ರೂಪಾಯಿಗಳನ್ನು, 1992-93 ರಲ್ಲಿ 1,40,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಹಣವನ್ನು 6 ಕಾರ್ಯಕ್ರಮಗಳ ಕೆಳಗೆ ನಾವು ಖರ್ಚು ಮಾಡಿದ್ದೇವೆ. ಮನೆ ಕಟ್ಟಿಸಿಕೊಳ್ಳುವುದಕ್ಕೆ ಸಬ್ಸಿಡಿ ಕೊಡುವದಾಗಲಿ ಅಥವಾ ಹಿಪ್ಪೆನೇರಳೆ ವ್ಯವಸಾಯಕ್ಕೆ ಅವರಿಗೆ ಬೇಕಾದ ಪ್ರೋತ್ಸಾಹ ಧನವಾಗಲಿ, ಹುಳು ಸಾಕಣೆ ಉಪಕರಣಗಳ ಸರಬರಾಜು ಮಾಡುವುದು. ಹೀಗೆ 6 ಕಾರ್ಯಕ್ರಮಗಳಿಗೆ ಪರಿಶಿಷ್ಟ ಜಾತಿಯವರಿಗೆ ಖರ್ಚು ಮಾಡಿದ್ದೇವೆ ಮತ್ತು ಪರಿಶಿಷ್ಟ ವರ್ಗದವರಿಗೆ 3 ಕಾರ್ಯಕ್ರಮಗಳಲ್ಲಿ ಖರ್ಚು ಮಾಡಿದ್ದೇವೆ. ಒಟ್ಟು ಎರಡು ವರ್ಷದ್ದು. ತಾವು 1991ರಿಂದ ಕೇಳಿದ್ದೀರಿ. ಎರಡು ವರ್ಷದ್ದು ಸೇರಿ ಪರಿಶಿಷ್ಟ ಜಾತಿಯವರಿಗೆ 6 ಲಕ್ಷ ರೂಪಾಯಿ ಮಂಜೂರಾದದ್ದು, ಅದರಲ್ಲಿ ಖರ್ಚು ಮಾಡಿರತಕ್ಕದ್ದು 4 ಲಕ್ಷದ 86 ಸಾವಿರ ರೂಪಾಯಿಗಳು. ಪರಿಶಿಷ್ಟ ವರ್ಗದವರಿಗೆ 4 ಲಕ್ಷ ರೂಪಾಯಿಗಳು ಮಂಜೂರ್ಮಾಡಿದ್ದರಲ್ಲಿ 1,75,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ತಾವು ಎರಡನೇ ಪ್ರಶ್ನೆ , ಇರಿಗೇಷನ್ ಬೋರ್‌ವೆಲ್ ಕೊಡುವುದರ ಬಗ್ಗೆ ಕೇಳಿದ್ದೀರಿ . ಎಸ್.ಸಿ.ಎಸ್.ಟಿ. ಕಾರ್ಪೊರೇಷನ್‌ನವರು ಈಗಾಗಲೇ ಇರಿಗೇಷನ್ ಬೋರ್‌ವೆಲ್‌ಗಳಿಗೆ ಹಣ ಕೊಡುತ್ತಿದ್ದಾರೆ. ಇದರ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ನಾವು ಹೊಸದಾಗಿ ಒಂದು ಕಾರ್ಯಕ್ರಮವನ್ನು ರೂಪಿಸಿ ಬರುವ ವರ್ಷದಿಂದ ಎಸ್.ಸಿ.ಎಸ್.ಟಿ. ಯವರಿಗೆ ಮತ್ತು ಬೇರೆಯವರಿಗೆ ಸಹ ಇರಿಗೇಷನ್ ಬೋರ್‌ವೆಲ್‌ಗಳನ್ನು ಕೊಡುವುದಕ್ಕೆ ಕಾರ್ಯಕ್ರಮ ರೂಪಿಸುತ್ತಿದ್ದೇವೆ.

ಶ್ರೀ ಎ. ಎಂ. ಬೆಳ್ಳಿಯಪ್ಪ : ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳಿಂದ ಒಂದು ಉತ್ತರ ಬರಲಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹಣ ಕೊಡುತ್ತಿದ್ದೀರಲ್ಲ ಅದರಲ್ಲಿ ಯಾವ ಪಾಲಿಸಿಯನ್ನು ಅನುಸರಿಸುತ್ತಿದ್ದೀರಿ? ಎಷ್ಟು ಕೊಡಬೇಕೆಂಬ ಪಾಲಿಸಿ ಇದೆ? ನನ್ನ ಲೆಕ್ಕದ ಪ್ರಕಾರ ಮತ್ತು ನಿಮ್ಮ ಹತ್ತಿರ ಇರತಕ್ಕ ಲೆಕ್ಕದ ಪ್ರಕಾರ ಪರಿಶಿಷ್ಟ ಜಾತಿಯವರಿಗೆ ಸರಾಸರಿ 1020 ರೂಪಾಯಿಗಳನ್ನು , ಪರಿಶಿಷ್ಟ ಪಂಗಡದವರಿಗೆ 2400 ರೂಪಾಯಿ ಬರುತ್ತಿದೆ. ಏತಕ್ಕೆ ಈ ವ್ಯತ್ಯಾಸ ಬಂತು. ಯೂನಿಫಾರಂ ಪಾಲಿಸಿ ಇಲ್ಲವೆ? ಸರ್ಕಾರದ ಪಾಲಿಸಿ ಏನು? ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ಈ ರೀತಿ ವ್ಯತ್ಯಾಸ ಏಕೆ?

ಡಾ. ಜಿ. ಪರಮೇಶ್ವರ : ಅವರಿಗೆ ನಾವು ಹಣಕೊಡುವಾಗ ಪರ್ಸೆಂಟೇಜ್ ಬೇಸಿಸ್ ಮೇಲೆ, 18 ಪರ್ಸೆಂಟ್ ಹಣ ಏನಿದೆ ಅದರಲ್ಲಿ 15 ಪರ್ಸೆಂಟ್ ಪರಿಶಿಷ್ಟ ಜಾತಿಯವರಿಗೆ, 3 ಪರ್ಸೆಂಟ್ ಪರಿಶಿಷ್ಟ ಪಂಗಡದವರಿಗೆ ಕೊಡಬೇಕೆಂದು ನೀತಿ ಇದೆ. ಅದರ ಪ್ರಕಾರ ಮಾಡಿಕೊಂಡು ಹೋಗಿದ್ದೇವೆ. ಇದರಲ್ಲಿ ಏನಾಗಿದ ಎಂದರೆ, ಇಲ್ಲಿ 77 ಜನ ಮಾತ್ರ ಪರಿಶಿಷ್ಟ ವರ್ಗದವರು ಇದ್ದಾರೆ.77 ಜನರಿಗೆ ಮಾತ್ರ ಕೊಟ್ಟಿದ್ದೇವೆ. ಪರಿಶಿಷ್ಟ ಜಾತಿಯವರು 165 ಜನರು ಇದ್ದಾರೆ. ಇದರಿಂದ ಹೆಚ್ಚಿಗೆ ಹಣ ಬಂದಿರಹುದು. ಅಷ್ಟು ಬಿಟ್ಟರೆ ಬೇರೇನೂ ವ್ಯತ್ಯಾಸ ಇಲ್ಲ.

<u>ವಿಷಯ :- ರಾಜ್ಯದಲ್ಲಿ ಮಿತವೇತನ ಪದವೀಧರರ ಸಂಖ್ಯೆ</u>